# ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯವಿಧಾನ ಪರಿಷತ್ ಸದಸ್ಯರ ಹೆಸರು : ಶ್ರೀ ಯು.ಬಿ.ವೆಂಕಟೇಶ್**

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2839**

**ಉತ್ತರಿಸಬೇಕಾದ ದಿನಾಂಕ : 29.03.2022**

**ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು**

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಜಿಲ್ಲಾವಾರು ನಷ್ಟದಲ್ಲಿರುವ ಸಹಕಾರಿ ಬ್ಯಾಂಕ್‌ಗಳು ಯಾವುವು: | 262 ಪಟ್ಟಣ ಸಹಕಾರ ಬ್ಯಾಂಕುಗಳ ಪೈಕಿ 221 ಪಟ್ಟಣ ಸಹಕಾರ ಬ್ಯಾಂಕುಗಳು ಲಾಭದಲ್ಲಿದೆ. 41 ಪಟ್ಟಣ ಸಹಕಾರ ಬ್ಯಾಂಕುಗಳು ನಷ್ಟದಲ್ಲಿವೆ. **(ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ)**<br><br>ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ಲಾಭದಲ್ಲಿದೆ. 21 ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ಪೈಕಿ 20 ಕೇಂದ್ರ ಸಹಕಾರ ಬ್ಯಾಂಕುಗಳು ಲಾಭದಲ್ಲಿದ್ದು, ಕಲಬುರಗಿ ಮತ್ತು ಯಾದಗಿರಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಮಾತ್ರ ನಷ್ಟದಲ್ಲಿರುತ್ತದೆ. |
| ಆ) | ನಷ್ಟದಲ್ಲಿರುವ ಸಹಕಾರಿ ಬ್ಯಾಂಕ್‌ಗಳನ್ನು ಪುನಃಶ್ಚೇತನಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು: | ನಷ್ಟದಲ್ಲಿರುವ ಕಲಬುರಗಿ ಮತ್ತು ಯಾದಗಿರಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ. ಈ ಬ್ಯಾಂಕಿನ ಪುನಶ್ಚೇತನಕ್ಕೆ ಸಂಬಂಧಿಸಿದಂತೆ ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿದೆ.<br><br>1) ನಬಾರ್ಡ್‌ನ ಅಂಗ ಸಂಸ್ಥೆಯಾದ ನ್ಯಾಬ್ಕೋನ್ಸ್‌ನಿಂದ ಪುನಃಶ್ಚೇತನ ವರದಿ ಪಡೆದು ಅದರಂತೆ ಪುನಃಶ್ಚೇತನ ಯೋಜನೆ ರೂಪಿಸಲಾಗಿದೆ.<br>2) ಸರ್ಕಾರದಿಂದ ರೂ.10.10 ಕೋಟಿಗಳ ಷೇರು ಮೊತ್ತವನ್ನು ಬ್ಯಾಂಕಿಗೆ ಬಿಡುಗಡೆ ಮಾಡಿದ್ದು, ಇದರಿಂದ ನಬಾರ್ಡ್‌ನ ಪುನರ್ಧನ ಪಡೆಯಲು ಅರ್ಹತೆ ಹೊಂದಿದ್ದು, ಅಪೆಕ್ಸ್ ಬ್ಯಾಂಕಿನಿಂದ ರೂ. 180 ಕೋಟಿ ಮತ್ತು ನಬಾರ್ಡ್‌ನಿಂದ ರೂ.90 ಕೋಟಿ ಸಾಲ ಮಂಜೂರಾಗಿರುತ್ತದೆ.<br><br>ದಿನಾಂಕ: 31-01-2020ಕ್ಕೆ ಸುಸ್ತಿಯಾದ ಮಧ್ಯಮಾವಧಿ ಹಾಗೂ ದೀರ್ಘಾವಧಿ ಕೃಷಿ ಸಾಲಗಳ ಅಸಲನ್ನು |

| | | |
|---|---|---|
| | | ಮರುಪಾವತಿಸಿದ್ದಲ್ಲಿ ಬಡ್ಡಿ ಮನ್ನಾ ಯೋಜನೆ ಜಾರಿಗೊಳಿಸಿದ್ದು, ಇದರಿಂದ 1094 ರೈತರಿಗೆ ರೂ.18.67 ಕೋಟಿ ಮೊತ್ತದ ಬಡ್ಡಿಮನ್ನಾ ಬಿಡುಗಡೆ ಮಾಡಿದ್ದು, ಇದರಿಂದ ಸಾಲ ವಸೂಲಾತಿ ಪ್ರಮಾಣ ಹೆಚ್ಚಿ ಎನ್.ಪಿ.ಎ ಕಡಿಮೆಯಾಗಿದೆ |
| ಇ) | ಸಹಕಾರಿ ಬ್ಯಾಂಕ್‌ಗಳು ನಷ್ಟ ಹೊಂದಲು ಕಾರಣರಾದವರ ಮೇಲೆ ಯಾವ ಕಾನೂನಿನಡಿಯಲ್ಲಿ ಕ್ರಮ ಜರುಗಿಸಲಾಗಿದೆ. | ಸಹಕಾರಿ ಬ್ಯಾಂಕುಗಳು ನಷ್ಟ ಹೊಂದಲು ಪ್ರಮುಖ ಕಾರಣ ಅನುತ್ಪಾದಕ ಆಸ್ತಿ ಮತ್ತು ಸಾಲ ವಸೂಲಾತಿಯಲ್ಲಿ ವೈಫಲ್ಯತೆ. ಈ ರೀತಿ ನಷ್ಟ ಹೊಂದಿದ ಬ್ಯಾಂಕ್‌ಗಳನ್ನು ದುರ್ಬಲ ಪಟ್ಟಣ ಸಹಕಾರ ಬ್ಯಾಂಕೆಂದು ಪರಿಗಣಿಸಿ ಬ್ಯಾಂಕಿನ ಕಾರ್ಯಚಟುವಟಿಕೆಗಳ ಬಗ್ಗೆ ಆರ್‌ಬಿಐ ಮತ್ತು ಸಹಕಾರ ಇಲಾಖೆ ಸಂಯೋಗದಲ್ಲಿ ಅಂತಹ ಬ್ಯಾಂಕ್‌ಗಳ ಆರ್ಥಿಕ ಸ್ಥಿತಿಗತಿಗಳನ್ನು ಪರಾಮರ್ಶಿಸಿ ಅಗತ್ಯ ಸಲಹೆ ಸೂಚನೆ ನಿರ್ದೇಶನಗಳನ್ನು ನೀಡಲಾಗುವುದು.<br><br>ಒಂದು ವೇಳೆ ಹಣ ದುರುಪಯೋಗ, ಮೋಸ, ವಂಚನೆಯಿಂದ ನಷ್ಟ ಉಂಟಾದಲ್ಲಿ ಅಂತಹ ಬ್ಯಾಂಕುಗಳ ವಿರುದ್ಧ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರ ಪ್ರಕರಣ 64 ರಡಿ ವಿಚಾರಣೆ ಅಥವಾ ಪ್ರಕರಣ 65 ರಡಿ ಪರಿವೀಕ್ಷಣೆ ನಡೆಸಿ ತಪ್ಪಿತಸ್ಥರ ವಿರುದ್ಧ ಸಿವಿಲ್ ಮತ್ತು ಕ್ರಿಮಿನಲ್ ಕ್ರಮ ಜರುಗಿಸಲಾಗುತ್ತದೆ. |

**ಸಂಖ್ಯೆ: ಸಿಒ 65 ಸಿಸಿಬಿ 2022**

ಎಸ್.ಟಿ. ಸೋಮಶೇಖರ್

**(ಎಸ್.ಟಿ. ಸೋಮಶೇಖರ್)**
**ಸಹಕಾರ ಸಚಿವರು**

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಯು ಬಿ ವೆಂಕಟೇಶ್ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2839 ಕ್ಕೆ ಅನುಬಂಧ**

**ನಷ್ಟದಲ್ಲಿರುವ ಪಟ್ಟಣ ಸಹಕಾರ ಬ್ಯಾಂಕುಗಳು**

| SL. NO | DIST.NAME | NAME OF THE BANKS |
|---|---|---|
| 1 | BENGALURU | Amanath C.B. Ltd., B'luru |
| 2 | | The Bharath Co-op.B.Ltd., B'luru |
| 3 | | Deepak C.B. Ltd., B'luru |
| 4 | | Sri Guru Ragavendra SBN, B'luru |
| 5 | | Sir M.Visvesvaraya CB,Ltd,B'luru |
| 6 | | Srimatha Mahila CB, B'luru |
| 7 | | Karnataka State Indl.CB, B'luru |
| 8 | BAGALKOT | Mudhol Urban Co-op. Bank Ltd,Mudhol |
| 9 | BELAGAVI | Jagruthi Co-op. Bank Ltd., Belagavi |
| 10 | | Bedkihal Urban C.B. Ltd., Bedkihal |
| 11 | | The Belgaum Indl.C.B. Ltd., Belagavi |
| 12 | | The Nesargi Urban CB Ltd., Nesaragi |
| 13 | | Akkamahadevi Mahila CB Ltd., Belagavi |
| 14 | BIDAR | Bidar Mahila Urban CB Ltd., Bidar |
| 15 | DHARWAD | The Kalghatgi Urban CB Ltd., Kalghatagi |
| 16 | DAVANGERE | Millath Co-op Bank Ltd., Davangere |
| 17 | HASSAN | City Co-op Bank Ltd., Hassan |
| 18 | | Sri Kannikaparameshwari CB Ltd, Hassan |
| 19 | KALBURGI | Sri Chatrapathi Shivaji Maharaj SB Ltd., Kalburgi |
| 20 | | Sree Mahathma Basaveswara CB Ltd, Afzalpur |
| 21 | | Sree Veerabhadreshwara CB Ltd., Chincholi |
| 22 | | Sri Shadakshari Shivayogi Siddarameshwara SB Ni., Aland |
| 23 | MAHILA UCBs | Abhivruddhi Mahila CB Ltd., Kalburgi |
| 24 | KOPFPLA | Sri Sharana Basaveshwara PSB Ltd.,Karatagi |
| 25 | MANDYA | Mandya City CB Ltd., Mandya |
| 26 | | Simsha Sahakara Bank Ltd., Maddur |
| 27 | MAHILA UCBs | Lokapavani Mahila SB Ltd., Mandya |
| 28 | RAICHUR | Sri Mallikarjuna Pattana SB Ltd., Maski |
| 29 | RAMANAGARA | Ramanagaram Urban CB Ltd., Ramanagara |
| 30 | CHITRADURGA | The Hiriyur Urban CB Ltd., Hiriyur |
| 31 | CHANNAPATTANA | Abhyudaya Mahila Urban CB Ltd., Channapattana |
| 32 | Shivamogga | Sahyadri Mahila Urban CB Ltd., Shivamogga |
| 33 | SALARY UCBs | VISL Employees CB Ltd., Bhadravathi |
| 34 | Tumakuru | Tumkur Grain Merchents CB Ltd., Tumakuru |
| 35 | | Tumkur Pattana Sahakara Bank Ltd., Tumakuru |
| 36 | MAHILA UCBs | Sri Sharada Mahila CB Ltd., Tumakuru |
| 37 | VIJAYAPURA | The Deccan Urban CB Ltd., Vijayapura |
| 38 | UDUPI | Manipal Co-op Bank Ltd., Udupi |
| 39 | | Narayanaguru Urban CB Ltd., Udupi |
| 40 | U.KANNADA | Karwar Urban CB Ltd., Karwar |
| 41 | MAHILA UCBs | Sree Durgadevi Mahila CB Ltd., Karwar |

ಸಹಕಾರ ಸಂಘಗಳ ಜಂಟಿ ನಿಬಂಧಕರು
(ಪಟ್ಟಣ ಬ್ಯಾಂಕುಗಳ ವಿಭಾಗ)